**ದಿಃ 07.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀಮತಿ ಎಂ.ಆರ್.ಸಿ ವಕೀಲರಿಂದಃ ವಾದಿಯರ ಪರವಾಗಿಃ**

**12)** ದಾವೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಪಹಣಿ ಪತ್ರಿಕೆಯನ್ನು ಗುರುತಿಸಿದ್ದು, ಅದನ್ನು ನಿ.ಪಿ-1 ಎಂದು ಗುರುತಿಸಲಾಯಿತು. ದಿನಾಂಕಃ 02.02.2023 ರ ಖರೀದಿ ಒಪ್ಪಂದ ಕರಾರು ಪತ್ರವನ್ನು ಹಾಜರುಪಡಿಸಿ ಗುರುತಿಸಿರುತ್ತಾರೆ. ದಾಖಲೆಯನ್ನು ಪರಿಶೀಲಿಸಲಾಗಿ ರೂ.6,25,000/- ಗಳಿಗೆ ಖರೀದಿ ಒಪ್ಪಂದ ಆಗಿರುತ್ತದೆ. ರೂ.500/- ಮುಖಬೆಲೆಯ ಸ್ಟಾಂಪ ಪೇಪರ ಮೇಲೆ ಬರೆಯಲಾಗಿರುತ್ತದೆ. ಕಡಿಮೆ ಸ್ಟಾಂಪ ಪೇಪರ ಮೌಲ್ಯ ಎಂದು ನ್ಯಾಯಾಲಯಕ್ಕೆ ಕಂಡು ಬಂದಿದೆ. ಆದ್ದರಿಂದ ಸ್ಟಾಂಪ ಮೌಲ್ಯದ ಮೇಲೆ ವಾದವನ್ನು ಆಲಿಸಲು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.